"ಅಲ್ಲಿ ಫಿಲ್ಟರ್‌ನಲ್ಲಿ ಡಿಕಾಕ್ಷನ್ ಇದೆ, ಕಾಫಿ ಮಾಡಿಕೋ, ಹಾಟ್ ಬಾಕ್ಸಿನಲ್ಲಿ ಅವಲಕ್ಕಿ ಒಗ್ಗರಣೆ ಮಾಡಿಟ್ಟಿದ್ದೇನೆ, ಅತ್ತೆಗೂ ಕೊಡು, ನೀನು ತಿನ್ನು, ತಡವಾಯಿತು. ಹನ್ನೊಂದಕ್ಕೆ ಮುಹೂರ್ತ."

"ಮುಹೂರ್ತ" ಅಕ್ಕಯ್ಯಮ್ಮ ಬಾಯಿಂದ ಅಚಾನಕ್ ಆಚೆ ಬಂತು ಮಾತು.

ಇದೀಗ ಮುಚ್ಚಿಡುವ ಮನಸ್ಸಾಗಲಿಲ್ಲ ಕೌಸಲ್ಯಗೆ. "ಹೌದು, ಮುಹೂರ್ತ. ಸೀತಾಕಲ್ಯಾಣ ಮಾಡುತ್ತಿದ್ದೇವೆ. ನಮ್ಮ ಮಹಿಳಾ ಸಂಘದಿಂದ" ಎಂದು ಹೆಮ್ಮೆಯಿಂದ ತನ್ನ ಅತ್ತೆಯ ಮುಖ ನೋಡಿ ಹೇಳಿದಳು. ಅವಳು ಮಾತು ಮುಗಿಸುವ ಮುನ್ನವೇ ಇದ್ದಕ್ಕಿದ್ದ ಹಾಗೆ ಪಕಪಕನೆ ನಗತೊಡಗಿದಳು ಅಕ್ಕಯ್ಯಮ್ಮ. ಕೌಸಲ್ಯಗೆ ಅವಮಾನವಾಯಿತು. "ಯಾಕೆ ನಗು" ಖಾರವಾಗಿ ಬಂತು ಪ್ರಶ್ನೆ.

"ಎಂತ ಇಲ್ಲ ಸುಮ್ಮನೆ" ಎಂದು ಬಾಯಿಗೆ ಸೆರೆಗು ಒತ್ತಿ ಹಿಡಿದು ನಗು ತಡೆವ ಪ್ರಯತ್ನ ಮಾಡಿದಳು ಅಕ್ಕಯ್ಯಮ್ಮ. ದುರುಗುಟ್ಟಿ ನೋಡಿದಳು ಕೌಸಲ್ಯ. ಅವಳ ಮುಖಭಾವ ನೋಡಿದ ಅಕ್ಕಯ್ಯಮ್ಮ ಇನ್ನು ಇವಳ ಕೋಪ ತಾರಕಕ್ಕೆ ಏರಿದರೆ ಕಷ್ಟ ಎಂದು ಎಣಿಸಿ, ನಗು ಹಿಡಿದಿಟ್ಟುಕೊಂಡಳು.

ಕೌಸಲ್ಯಳ ಹಣೆಯ ಸುಕ್ಕು ಮತ್ತಷ್ಟು ಪದರುಗಟ್ಟಿತು. ಇಸ್ತ್ರೀ ಪೆಟ್ಟಿಗೆಯನ್ನು ರಪ್ ಎಂದು ಕೆಳಗಿಟ್ಟಳು. ಮುದುಕಿಗೆ ಒಳಗೊಳಗೇ ಸಂತಸವಾದರೂ ತೋರಿಸಿಕೊಳ್ಳದೆ ಎಲೆ ಅಡಿಕೆ ಹುಡುಕುವ ಪ್ರಯತ್ನ ಮಾಡುತ್ತ ಒಳ ನಡೆಯಿತು.

ಅಕ್ಕಯ್ಯಮ್ಮನೂ ಅಲ್ಲಿಂದ ಕದಲುವ ಪ್ರಯತ್ನ ಮಾಡಿದಳು. ಆದರೆ ಅದು ಫಲ ನೀಡಲಿಲ್ಲ.

ಮತ್ತೊಮ್ಮೆ ಏರು ದನಿಯಲ್ಲಿ, "ನೀವು ನಕ್ಕಿದ್ದು ಎಂತಕ್ಕೆ ಅಂತ ಬೇಕು ನಂಗೆ" ಎಂದು ಆಜ್ಞೆ ಮಾಡಿದಳು. "ಎಂತ ಇಲ್ಲ ಮಹರಾಯ್ತಿ" ಎಂದು ಅಕ್ಕಯ್ಯಮ್ಮ ಎಷ್ಟೆಲ್ಲ ಹೇಳಿದರೂ ಕೌಸಲ್ಯ ಪಟ್ಟು ಬಿಡಲಿಲ್ಲ. ಆಕೆಯ ಉರಿ ಉರಿವ ಮುಖ ಭಾವ ನೋಡಿದ ಅಕ್ಕಯ್ಯಮ್ಮ, ಇನ್ನು ತಾನು ಉತ್ತರ ಹೇಳುವುದು ತಡಮಾಡಿದರೆ ಅನಾಹುತವಾದೀತು ಎಂದುಕೊಂಡು, "ಅಲ್ಲ ಮತ್ತೆ ನೀನೀಗ ಸೀತಾ ಕಲ್ಯಾಣ ಮಾಡಕ್ಕೆ ಹೋಗುದಾ" ಎಂದು ಪ್ರಶ್ನಿಸಿದಳು.

"ಹೌದು" ಎನ್ನುತ್ತ ಬಿಗುವಾಗಿ ಹೇಳುತ್ತಾ ಸೀರೆಯ ನೆರಿಗೆ ಸರಿ ಮಾಡಿಕೊಂಡಳು ಕೌಸಲ್ಯ.

ಅವಳ ಕೋಪದ ಮುಖ ಕಂಡ ಅಕ್ಕಯ್ಯಮ್ಮ ಮತ್ತೆ ಮತ್ತೆ ನಗು ಹತ್ತಿಕ್ಕಿಕೊಳ್ಳುವ ಪ್ರಯತ್ನ ಮಾಡುತ್ತಲೇ, "ನಿನ್ನ ಸೀರೆ ಚಂದ ಇದೆ ಕಣೇ. ಹೊಸ್ತಾ" ವರಸೆ ಬದಲಿಸಿದಳು...

"ನೀವು ಮಾತ್ ಮರೆಸೋದು ಬ್ಯಾಡ, ನೀವು ನಕ್ಕಿದ್ದು ಎಂತಕ್ಕೆ ಅಂತ ಹೇಳಿ..." ಪುನಃ ದಬಾಯಿಸಿದಳು

ಅಕ್ಕಯ್ಯಮ್ಮ ಮುಸಿ ಮುಸಿ ನಗುತ್ತಲೇ, "ಹಿಂಗೆ ಹೇಳ್ತೀನಿ ಅಂತ ಕೋಪ ಮಾಡ್ಕಂಬ್ಯಾಡ ಮತ್ತೆ... ಆ ಸೀತೆ ಒಂದ್ ಸರ್ತಿ ಮದ್ವೆ ಮಾಡ್ಕಂಡೇ ಬೆಂಕಿಗೆ ಹಾರ್ಕಂಡ್ಲು... ನೀವೆಲ್ಲ ಸೇರಿ ಮತ್ತೆ ಮದ್ವೆ ಮಾಡಕ್ಕೆ ಹೊರಟಿದ್ದೀರಲ್ಲ... ಅವ್ಳ ಕತೆ ಎಂತ ಅಂತ ನೆನ್ಸಕಂಡು ನಗು ಬಂತು ಕಣೇ" ಎನ್ನುತ್ತ ಜೋರು ನಗತೊಡಗಿದಳು... ಅಡಿಗೆ ಮನೆಯಲ್ಲಿ ಕುಕ್ಕರ್ ಜೋರು ಸಿಳ್ಳು ಹಾಕತೊಡಗಿತು.

## ದೀಪ್ತಿ ಭದ್ರಾವತಿ

ಪ್ರಸ್ತುತ ಭದ್ರಾವತಿಯಲ್ಲಿ ನೆಲೆಸಿರುವ ದೀಪ್ತಿ 'ಆ ಬದಿಯ ಹೂವು' ಕಥಾ ಸಂಕಲನ ಹಾಗೂ 'ಕಾಗದದ ಕುದುರೆ', 'ಗ್ರೀನ್ ರೂಮಿನಲ್ಲಿ' ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ನಾಟಕ ಅಭಿನಯ, ಯಕ್ಷಗಾನ, ತಾಳಮದ್ದಲೆ ಅವರ ಆಸಕ್ತಿಯ ಕ್ಷೇತ್ರಗಳು.